ಶ್ರೀ ಬಿ.ಎಸ್. ಯಡಿಯೂರಪ್ಪ: ನಿಮ್ಮೆಲ್ಲರನ್ನು ಕರೆಯುತ್ತೇನೆ. ನೀವೂ ಇಷ್ಟು ವರ್ಷ ಅಧಿಕಾರ ನಡೆಸಿದಿರಿ, ನೀವೇನು ಹೇಳುತ್ತೀರಿ, ನಿಮ್ಮ ಅನುಭವದ ಮೇಲೆ ಅದನ್ನು ನಾನು ಸ್ವೀಕಾರ ಮಾಡುವುದಕ್ಕೆ ಸಿದ್ಧನಿದ್ದೇನೆ. ಯಾವುದನ್ನೂ ಲಘುವಾಗಿ ತೆಗೆದುಕೊಳ್ಳುವುದಕ್ಕೆ ಸಿದ್ಧನಿಲ್ಲ. ನಾಳೆ ಅಧಿವೇಶನ ಮುಗಿದ ಮೇಲೆ ಕುಳಿತು ಚರ್ಚೆ ಮಾಡೋಣ. ಒಟ್ಟಾಗಿ ರೈತನನ್ನು ಉಳಿಸುವುದಕ್ಕೆ ಏನು ಬೇಕೋ ಅದನ್ನು ಮಾಡೋಣ. ಮಾನ್ಯ ಕುಮಾರಸ್ವಾಮಿಯವರು ಹೇಳಿದರು, ನಮ್ಮ ಪ್ರಧಾನ ಕಾರ್ಯದರ್ಶಿಯವರ ಬಗ್ಗೆ ಹೇಳುತ್ತಾ 24 ದಿವಸಗಳಲ್ಲಿಯೇ ಹುಳುಕು ಹಿಡಿದುಕೊಂಡು ಹೊರಟಿದ್ದಾರೆ. "ಹಳದಿ ಕನ್ನಡಕ ಹಾಕಿಕೊಂಡರೆ ಕಾಣುವುದೆಲ್ಲಾ ಹಳದಿಯೇ". ನಮ್ಮ ಪ್ರಧಾನ ಕಾರ್ಯದರ್ಶಿಯವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ, ನಾಳೆ ನಿಮಗೇನಾದರೂ ಲೋಪದೋಷಗಳು ಕಂಡರೆ ಯಡಿಯೂರಪ್ಪನವರೇ ಹೀಗಾಗಿದೆ ಎಂದು ಹೇಳಿದರೆ ನಾನು ಅದನ್ನು ಸರಿಪಡಿಸುತ್ತೇನೆ. ಅದು ಬಿಟ್ಟು ನೀವು ಈಗಲೇ ಆರೋಪಗಳನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದರೆ, ವರ್ಗಾವಣೆ ಮೇಲೆ ಕುಳಿತಿದ್ದೀರಿ, ಯಾರ್ಯಾರನ್ನು ಎಲ್ಲೆಲ್ಲಿ ಹಾಕಿದ್ದೀರಿ ಎಂದು ಗೊತ್ತು, ಹಾಗಾದರೆ ಕಳೆದ 10 ವರ್ಷಗಳಲ್ಲಿ ಆಯಕಟ್ಟಿನ ಸ್ಥಳದಲ್ಲಿ ಯಾರ್ಯಾರ ಕಾಲದಲ್ಲಿ ಯಾರ್ಯಾರನ್ನು ಹಾಕಿದ್ದಿರಿ ಎಂದು ಚರ್ಚೆಯಾಗಲಿ. ನಾನು ಹೇಗೆ ಎಲ್ಲ ವರ್ಗದ ಜನರಿಗೆ ಆದ್ಯತೆಯನ್ನು ಕೊಟ್ಟಿದ್ದೇನೆ, ನ್ಯಾಯ ಒದಗಿಸಿದ್ದೇನೆ, ಬೇರೆಯವರ ಕಾಲದಲ್ಲಿ ಏನೇನಾಗಿದೆ, ಅದರ ಬಗ್ಗೆ ಕೂಡ ಒಂದು ದಿನ ಚರ್ಚೆ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ಚರ್ಚೆ ಮಾಡೋಣ I am ready ಈ ಮನೆಯಲ್ಲಿ ಮುಚ್ಚಿಡುವುದು ಏನಿದೆ, ಇದು ಪಾರದರ್ಶಕ ಸರ್ಕಾರ. ನಾವು ಏನೂ ಮುಚ್ಚಿಡುವುದಕ್ಕೆ ಸಿದ್ದವಿಲ್ಲ. ಆದ್ದರಿಂದ ಜಂಟಿ ಸದನ ಸಮಿತಿಯ ಅಗತ್ಯವಿಲ್ಲ. ನಾವು ಈಗಾಗಲೇ ನ್ಯಾಯಾಂಗ ತನಿಖೆಗೆ ಆದೇಶ ಕೊಟ್ಟಿದ್ದೇವೆ. ವರದಿ ಬರಲಿ ದಯಮಾಡಿ ಸಹಕರಿಸಿ. ವಾಕ್‌ಔಟ್ ಮತ್ತೊಂದು ಮಾಡಬೇಡಿ. ಮೊದಲ ಬಾರಿಗೆ ನಾವೆಲ್ಲ ಒಟ್ಟಾಗಿದ್ದೇವೆ ಎಂಬ ಸಂದೇಶವನ್ನು ಕೊಡಿ.

(ಕಾಂಗ್ರೆಸ್ ಪಕ್ಷದ ಸದಸ್ಯರು ಬಾವಿಗೆ ಬಂದು ಧರಣಿ ಪ್ರಾರಂಭಿಸಿ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು)

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:..... ಅವರು ಒಪ್ಪಿಕೊಂಡಿದ್ದಾರೆ. ಎರಡನೆಯದು ಟರ್ಮ್ಸ್ ಆಫ್ ರೆಫರೆನ್ಸ್ ಅವರು ಒಪ್ಪಿಕೊಂಡಿದ್ದಾರೆ. ಮೂರನೆಯದು ಎಲ್ಲಾ ರೈತರಿಗೂ ಕಾಂಪೆನ್‌ಸೇಷನ್ ಕೊಡಿ ಎಂದು ಕೇಳಿದ್ದೇವೆ.

(ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿನಿರತರಾಗಿದ್ದರು)

ನಾಲ್ಕನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೃಷಿ ಸಚಿವರು ಕ್ಷಮೆ ಕೇಳಬೇಕೆಂದು ಹೇಳಿದ್ದೆವು. ಐದನೆಯದಾಗಿ, ಬಡ ರೈತರ ಮೇಲೆ ಏನು ಕೇಸ್‌ಗಳನ್ನು ಹಾಕಿದ್ದಾರೆ, ಅವುಗಳನ್ನು ವಿತ್‌ಡ್ರಾ ಮಾಡಬೇಕೆಂದು ಕೇಳಿದ್ದೆವು. ಇವು ಐದು ಪಾಯಿಂಟ್ ನಮ್ಮದು ಇತ್ತು. ಈ ಐದು ಪಾಯಿಂಟ್ ಬಿಟ್ಟು ಬೇರೆ ಯಾವ ಪಾಯಿಂಟ್ ಕೂಡ ಇಲ್ಲ. ಅದಕ್ಕಾಗಿ ಮೊದಲು ಜಂಟಿ ಸದನ ಸಮಿತಿ ಮಾಡುವುದಕ್ಕೆ ಮತ್ತು ಪರಿಹಾರವನ್ನು ಕೊಡುವುದಕ್ಕೆ ಮತ್ತು ಕ್ಷಮೆ ಕೇಳುವ ಕೆಲಸವನ್ನು ಮಾಡುವುದಕ್ಕೆ ಸರ್ಕಾರ ಒಪ್ಪಿಕೊಂಡರೆ ಸಾಕು. ಬಾಕಿಯದನ್ನು ಆಮೇಲೆ ನೋಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ): ಮಾನ್ಯ ಅಧ್ಯಕ್ಷರೆ, ಕ್ಷಮೆ ಕೇಳಬೇಕಾಗಿರುವವರು ಕಾಂಗ್ರೆಸ್ಸಿನವರು. ಏಕೆಂದರೆ ಈ ರಾಜ್ಯದ ಜನತೆಗೆ ರಸಗೊಬ್ಬರ ಬರದಂತೆ ರಾಜಕಾರಣ ಮಾಡಿ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ): ರಸಗೊಬ್ಬರ ಸಿಗದಂತೆ ಮಾಡಿರುವುದು ಕಾಂಗ್ರೆಸ್ ಸರ್ಕಾರ. ಗೊಬ್ಬರ ವಿಷಯಕ್ಕೆ ಸಂಬಂಧಪಟ್ಟಂತೆ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡದಿದ್ದವರು ನೀವು. ಆ ಕಾರಣದಿಂದ ಈ ರಾಜ್ಯದ ಜನತೆಯ ಕ್ಷಮೆ ಕೇಳಬೇಕಾಗಿರುವುದು ನೀವು. ನಾನು ಹೇಗೆ ಕೇಳುವುದಕ್ಕಾಗುತ್ತದೆ?

ಶ್ರೀ ಎಂ. ಶ್ರೀನಿವಾಸ್: ಇಷ್ಟೊಂದು ಹೊಟ್ಟೆ ಉರಿ ಇದ್ದುಬಿಟ್ಟರೆ ಇನ್ನು ಐದು ವರ್ಷದಲ್ಲಿ ನೀವು ಹೇಗಪ್ಪಾ ಬದುಕುತ್ತೀರಿ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ): ಮಾನ್ಯ ಅಧ್ಯಕ್ಷರೆ, ನ್ಯಾಯಾಂಗ ತನಿಖೆಯಾದ ಮೇಲೆ ನಾವೆಲ್ಲರೂ ಒಟ್ಟಿಗೆ ಕುಳಿತುಕೊಳ್ಳೋಣ. ನಮ್ಮ ರಾಜ್ಯದ ರೈತರು

ನೆಮ್ಮದಿಯಿಂದ ಬದುಕುವುದಕ್ಕೆ ಈ ಆತ್ಮಹತ್ಯೆಗಳು ನಿಲ್ಲುವುದಕ್ಕೆ ಯಾವ ರೀತಿಯ ಸಮಿತಿಯನ್ನು ಮಾಡುವುದಕ್ಕೂ ನಾನು ಸಿದ್ಧನಿದ್ದೇನೆ. ಆದರೆ ಈಗ ನ್ಯಾಯಾಂಗ ತನಿಖೆಯನ್ನು ಏನು ಮಾಡುತ್ತಿದ್ದೇವೆ, ಇಂಥ ಸಂದರ್ಭದಲ್ಲಿ ಜಂಟಿ ಸಮಿತಿಯ ಅಗತ್ಯವಿಲ್ಲ. ಬೇರೆ ಸಂದರ್ಭದಲ್ಲಿ ನೀವು ಯಾವ ಸಮಿತಿ ಹೇಳುತ್ತೀರೋ ಅದನ್ನು ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ರೈತರ ಒಳಿತಿಗಾಗಿ ಎಲ್ಲಕ್ಕೂ ನಾನು ಸಿದ್ಧನಿದ್ದೇನೆ.

(ಸದನದ ಬಾವಿಯಿಂದಲೇ ಕಾಂಗ್ರೆಸ್‌ನ ಹಲವಾರು ಸದಸ್ಯರು ಮಾತನಾಡುತ್ತಿದ್ದರು)

ಅಧ್ಯಕ್ಷರು: ನೋಡಿ ಒಂದು ಸಲ ನೀವು ಸದನದ ಬಾವಿಗೆ ಬಂದಮೇಲೆ ಅಲ್ಲಿಂದಲೇ ನೀವು ಮಾತನಾಡುವುದಕ್ಕೆ ನಿಯಮದ ಪ್ರಕಾರ ಅವಕಾಶವಿಲ್ಲ. ಈಗಾಗಲೇ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಿಮ್ಮ ಬೇಡಿಕೆ ಏನಿತ್ತೋ ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆದಕಾರಣ ಸದನದ ಬಾವಿಯಲ್ಲಿರುವ ಸದಸ್ಯರುಗಳು ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು. ಅಜೆಂಡಾ ಪ್ರಕಾರ ಏನು ಕಾರ್ಯಕಲಾಪವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಚರ್ಚೆಯನ್ನು ಪ್ರಾರಂಭ ಮಾಡೋಣ. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

(ಸದನದ ಬಾವಿಯಲ್ಲಿದ್ದ ಕಾಂಗ್ರೆಸ್ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)

ಅಧ್ಯಕ್ಷರು: ರಾಜ್ಯಪಾಲರು ದಯಪಾಲಿಸಿದ ಭಾಷಣದ ಮೇಲೆ ವಂದನಾ ನಿರ್ಣಯದ ಮೇಲೆ ಚರ್ಚೆ ಆಗಬೇಕಾಗಿದೆ. ಅದನ್ನು ಪ್ರಾರಂಭ ಮಾಡೋಣ. ದಯವಿಟ್ಟು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಈಗಾಗಲೇ ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾನೂ ಕೂಡ ಚರ್ಚೆಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ನೀವೆಲ್ಲರೂ ಚೆರ್ಚೆಯಲ್ಲಿ ಭಾಗವಹಿಸಿದ್ದೀರಿ. ನಿಮ್ಮ ಮನಸ್ಸಿನಲ್ಲಿದ್ದ ವಿಚಾರಗಳನ್ನು ಹೇಳಿದ್ದೀರಿ. ಅವುಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಸಾಕಷ್ಟು ಉತ್ತರವನ್ನು ಕೊಟ್ಟಿದ್ದಾರೆ. ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅಗತ್ಯಬಿದ್ದರೆ ಪ್ರತ್ಯೇಕವಾದ ಸಮಿತಿಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಆದುದರಿಂದ ಈಗ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡೋಣ. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಯನ್ನು ಮಾಡುತ್ತಿದ್ದೇನೆ.